◆ **ನಿಮ್ಮ 'ನೋ ಪ್ರೆಸೆಂಟ್ಸ್ ಪ್ಲೀಸ್' ಕೃತಿಗೆ ದಕ್ಷಿಣ ಏಷ್ಯಾದ ಪ್ರತಿಷ್ಠಿತ ಡಿಎಸ್‌ಸಿ ಪ್ರಶಸ್ತಿ ಸಂದಿದೆ. ಈ ಗೌರವವನ್ನು ಒಬ್ಬ ಕನ್ನಡಿಗನಾಗಿ ಹೇಗೆ ನೋಡ್ತೀರಾ?**

ನಾನಿದನ್ನು ಅಪೇಕ್ಷೆನೇ ಮಾಡಿರಲಿಲ್ಲ. ಈ ಸ್ಪರ್ಧೆಯ ಬಗ್ಗೆ ಮೊದಲು ನನಗೆ ಹೆಚ್ಚು ಗೊತ್ತಿರಲಿಲ್ಲ. ಆದರೆ ಈಗ ಗೊತ್ತಾಗ್ತಾ ಗೊತ್ತಾಗ್ತಾ ಒಬ್ಬ ಕನ್ನಡಿಗನಾಗಿ ಹೆಮ್ಮೆ ಅನಿಸಲಿಕ್ಕೆ ಶುರುವಾಗಿದೆ. ಸ್ಪರ್ಧೆಯಲ್ಲಿದ್ದ ಎಂಬತ್ತು ಕೃತಿಗಳು ಏಷ್ಯಾದ ವಿಶ್ವವಿಖ್ಯಾತ ಲೇಖಕರಿಂದ ಇಂಗ್ಲಿಷಿನಲ್ಲಿಯೇ ಬರೆಯಲ್ಪಟ್ಟ ಒರಿಜಿನಲ್ ಕೃತಿಗಳು. ಅದರಲ್ಲಿ ನನ್ನದೊಂದು ಗೋಕರ್ಣ ಬಂಕಿಕೊಡ್ಲ ಬಸ್‌ನ ಹಾಗೆ ಅನುವಾದ ಕೃತಿ ಇತ್ತು. ತೇಜಸ್ವಿನಿ ನಿರಂಜನರ ಸಮರ್ಥ ಅನುವಾದದೊಂದಿಗೆ ಇಂಗ್ಲಿಷಿಗೆ ಹೋದಂಥ ಪುಸ್ತಕವದು. ಅನುವಾದ ಕೃತಿಗೆ ಪ್ರಶಸ್ತಿ ಬರುವುದು ಬಹಳ ಕಷ್ಟ. ಯಾಕೆಂದರೆ ಸ್ವತಂತ್ರ ಕೃತಿಗಳು ಯಾವಾಗಲೂ ಹೆಚ್ಚು ಎದ್ದುಕಾಣುತ್ತವೆ ಅಲ್ವಾ?

ಆದರೆ ಏಕಾಏಕಿ ಪ್ರಶಸ್ತಿ ಘೋಷಣೆ ಆದಾಗ ನನಗೆ ಆಶ್ಚರ್ಯವೂ ಆಯ್ತು, ಖುಷಿಯೂ ಆಯ್ತು. ಈ ಕೃತಿ ಭಾರತದ ಗಡಿಗಳ ಆಚೆಗೆ ಜಾಗತಿಕ ನೆಲೆಯಲ್ಲಿ ಕನ್ನಡವನ್ನು ಎತ್ತಿ ಹಿಡಿದ ಹಾಗೆ ಅನಿಸಿತು. ಈ ಪ್ರಶಸ್ತಿಯೊಟ್ಟಿಗೆ ಮೂರು ಸಂಗತಿಗಳು ಜರುಗಿದವು. ಒಂದು, ಕನ್ನಡ ಜಾಗತಿಕ ಮಟ್ಟದಲ್ಲಿ ಎಲ್ಲರ ಗಮನ ಸೆಳೆಯಿತು. ಎರಡನೆಯದ್ದು ಸಣ್ಣಕಥೆಗಳ ಪ್ರಕಾರದ ಮೇಲೆ ಬೆಳಕು ಬಂತು. ಮೂರು, ಅನುವಾದ ಕಲೆಗೆ ಮನ್ನಣೆ ಸಿಕ್ಕಿದಂತಾಯ್ತು. ಈ ಪ್ರಶಸ್ತಿಯಿಂದ ಪ್ರಾದೇಶಿಕ ಭಾಷೆ, ಸಣ್ಣಕತೆಯ ಪ್ರಕಾರ ಮತ್ತು ಅನುವಾದ ಈ ಮೂರು ಎಲಿಮೆಂಟ್‌ಗಳಿಗೆ ಮತ್ತೆ ಜೀವದಾನ ಕೊಡುವ ಹಾಗಿದೆ.

◆ **ಬರವಣಿಗೆಗೂ ಪ್ರಶಸ್ತಿಗಳಿಗೂ ಇರುವ ನಂಟು ಎಂಥದ್ದು?**

ಅದು ಒಂದೊಂದು ವಯಸ್ಸಲ್ಲಿ ಒಂದೊಂದು ಥರ ಇರ್ತದೆ. ನನ್ನ ಹೆಚ್ಚಿನ ಕಥೆಗಳು ಕಥಾಸ್ಪರ್ಧೆಗಳಿಗೆ ಬರೆದಿರುವಂಥದ್ದು. ನಾನು ಅಂತಲ್ಲ, ಲಂಕೇಶ್, ತೇಜಸ್ವಿ, ಬೊಳುವಾರು, ಮೊಗಳ್ಳಿ, ವಿವೇಕ, ಶ್ರೀರಾಮ, ನಾಗವೇಣಿ ಹೀಗೆ ಬಹುತೇಕ ಎಲ್ಲ ಸಾಹಿತಿಗಳು ಕಥಾಸ್ಪರ್ಧೆಗೆ ಕಳಿಸಿ, ಬಹುಮಾನ ಪಡೆದು ಸಂಪ್ರೀತರಾದವರು. ಇವೆಲ್ಲ ಚಿಕ್ಕ ವಯಸ್ಸಿನಲ್ಲಿ ಬರವಣಿಗೆಗೆ ಕುಮ್ಮಕ್ಕು ಕೊಡುತ್ತದೆ. ಜತೆಗೆ ಸ್ಪರ್ಧೆಯ ನೆವದಲ್ಲಿ ನಮ್ಮ ಕಥೆಗಳನ್ನು ಖ್ಯಾತನಾಮರು ಓದ್ತಾರೆ ಎನ್ನುವುದೊಂದು ಇರ್ತದಲ್ಲ. ಅದೂ ಮಹತ್ವದ್ದು. ಬಹುಮಾನ ಸಿಕ್ಕಾಗ ತೀರ್ಪುಗಾರರ ಟಿಪ್ಪಣಿ ಓದುವುದಕ್ಕೆ ತುಂಬ ಖುಷಿ. ಯಾಕೆಂದರೆ ನಮ್ಮ ಕಥೆಗಳಿಗೆ ಸುಲಭವಾಗಿ ಸ್ಪಂದನ ಸಿಗುತ್ತಿರುವುದಿಲ್ಲ. ಹೀಗಾಗಿ ಪ್ರಶಸ್ತಿ ಎನ್ನುವುದು ಒಂದು ಸ್ಪಂದನ ಎಂದೇ ನನಗೆ ಅನಿಸುತ್ತದೆ.

ಆದರೆ ಸಮಸ್ಯೆ ಏನಂದ್ರೆ ಈ ಪ್ರಶಸ್ತಿಗಳು, ಮನ್ನಣೆ, ಕೆಂಪು ಕುರ್ಚಿ ಮೇಲೆ ಕೂಡಿಸಿ ಕೈಯಲ್ಲಿ ಕೊಟ್ಟ ಹಣ್ಣುಗಳು... ಆ ಹಣ್ಣು ಹಣ್ಣಾಗೂದೇ ಇಲ್ಲ. ಅದು ಸನ್ಮಾನಕ್ಕೆಂದೇ ಜೈವಿಕವಾಗಿ ತಯಾರಿಸಿದ ಹಣ್ಣುಗಳು. ಇವೆಲ್ಲ ಸೇರಿ ಬರವಣಿಗೆಯ ಮೂಲ ಉದ್ದೇಶವೇ ಸನ್ಮಾನ, ಪ್ರಶಸ್ತಿ ಎಂಬ ತಪ್ಪು ಕಲ್ಪನೆ ಹೊಸ ಲೇಖಕರಲ್ಲಿ ಮೂಡುವಂತೆ ಆಗಿಬಿಡುವ ಅಪಾಯ ಇದೆ.

ನಾನು ಕಥೆ ಬರ್ದಿದೇನೆ, ಕಾದಂಬರಿ ಬರ್ದಿದೇನೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳಬೇಕಾದ ಲೇಖಕ ನನಗೆ ಆ ಪ್ರಶಸ್ತಿ ಬಂದಿದೆ, ಈ ಸನ್ಮಾನ ಆಗಿದೆ ಎಂದು ಹೇಳಿಕೊಳ್ಳಲು ಶುರುಮಾಡಿದರೆ ಅದು ರಾಂಗ್ ಸಿಗ್ನಲ್. ಬರವಣಿಗೆ ಎನ್ನುವುದು ಮ್ಯಾರಥಾನ್ ರೇಸ್ ಥರ. ಕಾಲೇಜಿನಿಂದ ಹೊರಟವನು ಯಾವುದೋ ಗುಡ್ಡಕ್ಕೆ ಹೋಗಿ, ಮತ್ಯಾವ್ದೋ ಕೂಟಸ್ಥಾನಕ್ಕೆ ಹೋಗಿ ಅಲ್ಲೊಂದು ಸೈನ್ ತಗೊಂಡು ಐದೋ ಹತ್ತೋ ಕಿಲೋಮೀಟರ್ ಓಡಿ ಮತ್ತೆ ಕಾಲೇಜಿಗೆ ಬರಬೇಕು. ಮಧ್ಯ ಅಲ್ಲಲ್ಲಿ ಜನ ನಿಂತ್ಕೊಂಡು ಪ್ರೋತ್ಸಾಹ ಕೊಡ್ತಾರೆ. ಲಿಂಬೂಪಾನಕ ಕೊಡ್ತಾರೆ, ಮೂಸಂಬಿ ಜ್ಯೂಸ್ ಕೊಡ್ತಾರೆ. ಇವನು ಅದನ್ನು ಕುಡಿದು, ಬಾಟಲಿ ಎಸೆದು, ನಕ್ಕು, ಕೈಬೀಸಿ ಮುಂದೆ ಓಡಬೇಕಷ್ಟೆ.